# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್-5990/2014/ಡಿಆರ್‌ಇ-1

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ : 24/10/2016

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ.ಟಿ.ಬಿ.ಕುಮಾರ್ ನಾಯ್ಕ, ಮುಖ್ಯಧಿಕಾರಿಗಳು ಗ್ರೇಡ್-2 ಕಡೂರು ಪುರಸಭೆ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ, ಇವರ ವಿರುದ್ಧ ಸಲ್ಲಿಸಿದ ದೂರಿನ ಸಂಬಂಧ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿನ ವರದಿ.

******

1) ಶ್ರೀ.ಕೆ.ಸಿ.ರಮೇಶ್ ಬಿನ್ ಕೆ.ಬಿ.ಚಂದ್ರಶೇಖರ್, ಕೆ.ವಿ.ಕಾಲೋನಿ, ಕಡೂರು, ಚಿಕ್ಕಮಗಳುರು ಜಿಲ್ಲೆ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರು ಸರ್ಕಾರಿ/ಸಾರ್ವಜನಿಕ ನೌಕರರಾದ ಶ್ರೀ.ಟಿ.ಬಿ.ಕುಮಾರ್ ನಾಯ್ಕ, ಮುಖ್ಯಧಿಕಾರಿಗಳು ಗ್ರೇಡ್-2 ಕಡೂರು ಪುರಸಭೆ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ, (ಇನ್ನು ಮುಂದೆ ಎದುರುಧಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2) ಈ ಪ್ರಕರಣದಲ್ಲಿ ದೂರುದಾರರು ಚಿಕ್ಕಮಗಳೂರು ಕಡೂರು ಟೌನ್ ಪುರಸಭಾ ವ್ಯಾಪ್ತಿಯಲ್ಲಿ 7ನೇ ವಾರ್ಡಿನ ಅಸೆಸ್‌ಮೆಂಟ್ ನಂ.5547/ಎ, 5400/ಎ, 5552/ಎ, 5405/1ಎ ಯಲ್ಲಿ ಎಸ್.ಸುಬ್ರಮಣ್ಯ ಮತ್ತು ವಸಂತ ಎಂಬುವರು ವಾಣಿಜ್ಯ ಕಟ್ಟಡ ನಿರ್ಮಾಣ ಮಾಡುತ್ತಿದ್ದು, ಕಟ್ಟಡ ಪರವಾನಗಿ 18/12/11 ರಲ್ಲಿ ಮುಕ್ತಾಯವಾಗಿದ್ದರೂ ಸಹ ಕಟ್ಟಡ ಪರವಾನಗಿಯನ್ನು ನವೀಕರಿಸಿಕೊಂಡಿಲ್ಲ. ಈ ಬಗ್ಗೆ ಪುರಸಭಾ ಮುಖ್ಯಾಧಿಕಾರಿಗಳಿಗೆ ಲಿಖಿತವಾಗಿ ಅರ್ಜಿ ನೀಡಿದರೂ ಸಹ ಕೆಲಸವನ್ನು ನಿಲ್ಲಿಸಿಲ್ಲ. ದಿ.18/3/13 ರಂದು ಚಿಕ್ಕಮಗಳೂರು ಲೋಕಾಯುಕ್ತ ಪೊಲೀಸ್ ಅಧೀಕ್ಷಕರಿಗೆ ಕಡೂರು ಪ್ರವಾಸ ಮಂದಿರದಲ್ಲಿ ದೂರು ನೀಡಿದರೂ ಪ್ರಯೋಜನವಾಗಿಲ್ಲ ಎಂದು ಆಪಾದನೆ ಮಾಡಿ ದೂರು ಸಲ್ಲಿಸಿರುತ್ತಾರೆ.

3) ದೂರುದಾರರ ದೂರಿನ ಮೇಲೆ ಆಕ್ಷೇಪಣೆಯನ್ನು ಸಲ್ಲಿಸುವಂತೆ ಎದುರುದಾರರಿಗೆ ಆದೇಶಿಸಲಾಗಿತ್ತು. ಎದುರುದಾರರು ಸಲ್ಲಿಸಿದ ಆಕ್ಷೇಪಣೆಯಲ್ಲಿ ಎಸ್.ಸೋಮಶೇಖರ್ ಬಿನ್ ಸುಬ್ರಹ್ಮಣ್ಯ ಮತ್ತು ಎಸ್.ವಸಂತ ಬಿನ್ ಸೋಮಶೇಖರ್ ಇವರ ಹೆಸರಿನಲ್ಲಿ ಜಂಟಿಯಾಗಿ ಖಾತೆ ಇರುವ ಮು.ಆ.ನಂ.5547/ಎ, 5400/ಎ, 5552/ಎ, 5405/1ಎ, ನಿವೇಶನದಲ್ಲಿ ವಾಣಿಜ್ಯ ಸಂಕೀರ್ಣ ನಿರ್ಮಿಸಲು ಕಡೂರು ಪುರಸಭೆಯಿಂದ ದಿ.19/12/10 ರಲ್ಲಿ ಪರವಾನಗಿ ನೀಡಿದ್ದು, ಸದರಿ ಪರವಾನಗಿಯು ದಿ.18/12/11 ರ ವರೆಗೆ ಚಾಲ್ತಿಯಲ್ಲಿದ್ದು, ನಂತರ ಪರವಾನಗಿಯನ್ನು

ನವೀಕರಿಸಿಕೊಂಡಿಲ್ಲ. ಕಟ್ಟಡ ಪರವಾನಗಿಯ ಷರತ್ತು ಮತ್ತು ನಿಬಂಧನೆಯನ್ನು ಉಲ್ಲಂಘಿಸಿ ಕಟ್ಟಡ ಕಟ್ಟುತ್ತಿರುವುದು ಪರಿಶೀಲನೆಯಿಂದ ಕಂಡುಬಂದಿದ್ದು, ಅನಧಿಕೃತ ನಕ್ಷೆಯಂತೆ ನಿಯಮ ಉಲ್ಲಂಘಿಸಿ ಕಟ್ಟಡ ಕಟ್ಟುತ್ತಿರುವ ಬಗ್ಗೆ ಸದರಿಯವರಿಗೆ ದಿ.25/1/13 ಮತ್ತು ದಿ.1/3/13 ರಂದು ಕಚೇರಿಯಿಂದ ನೋಟೀಸು ಜಾರಿಗೊಳಿಸಿದ್ದು, ಸದರಿಯವರು ಯಾವುದೇ ಉತ್ತರ ನೀಡಿರುವುದಿಲ್ಲ. ಈಗಾಗಲೇ ಕಟ್ಟಡ ಪೂರ್ಣಗೊಂಡಿದ್ದು, ಕರ್ನಾಟಕ ಪುರಸಭೆಗಳ ಅಧಿನಿಯಮ 1964 ರ ಪ್ರಕರಣ 107 ರನ್ವಯ ಸದರಿ ಕಟ್ಟಡಗಳಿಗೆ ಸಾಮಾನ್ಯವಾಗಿ ವಿಧಿಸಬಹುದಾದ ಆಸ್ತಿ ತೆರಿಗೆ ಮೇಲಿನ 2 ರಷ್ಟು ಮೊತ್ತನ್ನು ಪ್ರತಿ ವರ್ಷ ಜುಲ್ಮಾನೆಯಾಗಿ ವಿಧಿಸಬಹುದಾಗಿದೆ. ಈ ಜುಲ್ಮಾನೆ ಮೇರೆಗೆ ಸದರಿ ಅಕ್ರಮವನ್ನು ಸಕ್ರಮ ಗೊಳಿಸಲಾಗಿರುವುದಿಲ್ಲ. ಸರ್ಕಾರದ ಅಧಿಸೂಚನೆಯಂತೆ ಸಕ್ರಮ ಗೊಳಿಸಬಹುದಾಗಿದೆ ಎಂದು ಹೇಳಿರುತ್ತಾರೆ.

4) ಎದುರುದಾರರ ಆಕ್ಷೇಪಣೆಯ ಮೇಲೆ ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿದ್ದು, ತನ್ನ ಪ್ರತ್ಯುತ್ತರದಲ್ಲಿ ಪರವಾನಗಿಯನ್ನು ನವೀಕರಸದೆ ಅವಧಿ ಮೀರಿದರೂ ಕೂಡ ಕಟ್ಟಡ ಕಟ್ಟುತ್ತಿರುವ ಬಗ್ಗೆ ಕಡೂರು ಪುರಸಭೆಯ ಮುಖ್ಯಾಧಿಕಾರಿಗಳು ಯಾವುದೇ ನೋಟೀಸು ನೀಡಿ ಕಟ್ಟಡ ಪರಾನಗಿ ನವೀಕರಿಸಲು ಎಚ್ಚರಿಕೆ ನೀಡಿಲ್ಲ. ಪರವಾನಗಿ ಇಲ್ಲದೆ ಕಟ್ಟಡ ನಿರ್ಮಿಸುತ್ತಿದ್ದರೂ ಕೂಡ ಕಂಡೂ ಕಾಣದಂತೆ ಇದ್ದರು. ದಿ.25/1/13 ಮತ್ತು ದಿ.1/3/13 ರಂದು ತಿಳುವಳಿಕೆ ನೋಟೀಸು ನೀಡಿದ್ದು ಬಿಟ್ಟರೆ ಕಾಮಗಾರಿ ನಿಲ್ಲಿಸಲು ಯಾವುದೇ ಕ್ರಮ ಕೈಗೊಂಡಿಲ್ಲ. ಇವರೆಲ್ಲರ ಸಹಕಾರದ್ದಿಂದ ಕಟ್ಟಡ ಪೂರ್ಣಗೊಂಡಿರುತ್ತದೆ. ಈ ಅಕ್ರಮ ಕಟ್ಟಡಕ್ಕೆ ವಿದ್ಯುತ್ ಸರಬರಾಜಿಗೆ ನಿರಾಕ್ಷೇಪಣ ಪತ್ರವನ್ನು ಕೂಡ ನೀಡಿ ಸಹಕರಿಸಿರುತ್ತಾರೆ. ಹಾಗೆಯೇ ಉದ್ದಿಮೆ ಪರವಾನಗಿಯನ್ನು ನೀಡಿ ವಸತಿ ಗೃಹ ಮತ್ತು ಅಂಗಡಿಯನ್ನು ನಡೆಸಲು ಸಹಕರಿಸಿರುತ್ತಾರೆ. ಈ ರೀತಿಯಾಗಿ ಎದುರುದಾರರು ತಮ್ಮ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆಂದು ಹೇಳಿರುತ್ತಾರೆ.

5) ಎದುರುದಾರರು ದಿ.28/1/13 ಮತ್ತು ದಿ.1/3/13 ರಂದು ಕಟ್ಟಡ ಕಾಮಗಾರಿ ನಡೆಸುತ್ತಿದ್ದ ಕಟ್ಟಡದ ಮಾಲೀಕರಿಗೆ ನೋಟೀಸು ನೀಡಿ, ಕಟ್ಟಡ ಪರವಾನಗಿಯನ್ನು ನವೀಕರಣ ಮಾಡದೆ ಕಾಮಗಾರಿ ನಡೆಸುತ್ತಿದ್ದು ಹಾಗೂ ಅನುಮೋದಿತ ನಕ್ಷೆಯಂತೆ ಕಟ್ಟಡ ಕಟ್ಟುತ್ತಿಲ್ಲ ಆದ್ದರಿಂದ, ಕಟ್ಟಡ ಕಾಮಗಾರಿಯನ್ನು ನಿಲ್ಲಿಸಬೇಕೆಂದು ನೋಟೀಸು ನೀಡಿರುವುದು ಕಂಡುಬರುತ್ತದೆ. ಆದರೆ, ಅವರೇ ಒಪ್ಪಿಕೊಂಡಂತೆ ದಿ.18/12/11 ರಂದು ಕಟ್ಟಡ ನಿರ್ಮಾಣದ ಪರವಾನಗಿ ಅವಧಿ ಮುಕ್ತಾಯಗೊಂಡಿರುತ್ತದೆ. ಆದರೂ ಸುಮಾರು ಒಂದು ವರ್ಷ ಕಳೆದ ನಂತರ ಕಟ್ಟಡದ ಮಾಲೀಕರಿಗೆ ನೋಟೀಸು ನೀಡಿರುತ್ತಾರೆ.

6) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಕಟ್ಟಡ ಪರವಾನಗಿ ಮುಕ್ತಾಯಗೊಂಡ ನಂತರ ನವೀಕರಿಸದೆ, ಕಟ್ಟಡ ಕಟ್ಟುತ್ತಿರುವ ಬಗ್ಗೆ ತಕ್ಷಣವೇ ಏನು ಕ್ರಮ ಕೈಗೊಂಡಿದ್ದಾರೆ ಎನ್ನುವ ಬಗ್ಗೆ ಯಾವುದೇ ಉತ್ತರ ನೀಡಿಲ್ಲದ ಕಾರಣ ಎದುರುದಾರರನ್ನು, ದೂರುದಾರರನ್ನು ಕರೆಸಿ ವಿಚಾರಣೆ ನಡೆಸಲಾಗಿತ್ತು.

7) ಎದುರುದಾರರು ಹಾಜರಾಗಿ ಎಸ್.ಸೋಮಶೇಖರ್ ಮತ್ತು ವಸಂತ ಎಂಬುವರು ದೂರಿನಲ್ಲಿ ಕಾಣಿಸಿದ ಖಾತಾ ಸಂಖ್ಯೆಯ ನಿವೇಶನಗಳಲ್ಲಿ ಕಟ್ಟಡ ಕಟ್ಟಲು ಪರವಾನಗಿಯನ್ನು ದಿ.19/12/2010

Sd/-
24/1-7/16.

ರಂದು ಪಡೆದುಕೊಂಡಿದ್ದು, ಅದರಂತೆ ನೆಲಮಹಡಿ ಮತ್ತು 3 ಅಂತಸ್ತುಗಳನ್ನು ಕಟ್ಟಲು ಅನುಮತಿ ನೀಡಲಾಗಿತ್ತು. ಸದರಿ ಪರವಾನಗಿಯನ್ನು ಒಂದು ವರ್ಷದ ಅವಧಿಗೆ ನೀಡಿದ್ದು, ಸದರಿ ಅವಧಿ ಮುಗಿದ ನಂತರ ಅದನ್ನು ನವೀಕರಿಸಿಕೊಂಡಿಲ್ಲ. ಹಾಗೆಯೇ ಅನುಮತಿ ಇಲ್ಲದೆ 4ನೇ ಅಂತಸ್ತನ್ನು ಪೂರ್ಣಗೊಳಿಸಿ, 5ನೇ ಅಂತಸ್ತನ್ನು ಭಾಗಶಃ ನಿರ್ಮಾಣ ಮಾಡಿರುತ್ತಾರೆ. ಸದರಿಯವರಿಗೆ ನೀಡಿದ ಪರವಾನಗಿಯ ಕಡತ ಕಚೇರಿಯಲ್ಲಿ ಲಭ್ಯವಿಲ್ಲ. ಹಿಂದಿನ ವಿಷಯ ನಿರ್ವಾಹಕರು ಸದರಿ ಕಡತದ ಪ್ರಭಾರವನ್ನು ವಹಿಸಿಕೊಟ್ಟಿಲ್ಲ ಎಂದು ಲಿಖಿತ ಹೇಳಿಕೆಯನ್ನು ಸಲ್ಲಿಸಿದ ಕಾರಣ ಅನಧಿಕೃತವಾಗಿ ಪರವಾನಗಿ ಮತ್ತು ಅನುಮೋದಿತ ನಕಾಶೆ ಇಲ್ಲದೆ ಕಟ್ಟಿದ 4 ಮತ್ತು 5ನೇ ಅಂತಸ್ತನ್ನು ತೆರವುಗೊಳಿಸುವ ಬಗ್ಗೆ ಕಾನೂನು ರೀತ್ಯ ಸೂಕ್ತ ಕ್ರಮ ಕೈಗೊಂಡು ವರದಿ ನೀಡುವಂತೆ ಮತ್ತು ಕಡೂರು ಪುರಸಭೆಯ ಮುಖ್ಯಾಧಿಕಾರಿಗಳಿಗೆ ದೂರಿನಲ್ಲಿ ಕಾಣಿಸಿದ ಕಟ್ಟಡದ ಕಾಮಗಾರಿಗೆ ಸಂಬಂಧಿಸಿದ ಮೂಲ ಕಡತವನ್ನು ಹಾಜರು ಪಡಿಸಲು ಹಾಗೂ ಪರವಾನಗಿ ಇಲ್ಲದೆ ಕಟ್ಟಿರುವ 4 ಮತ್ತು 5ನೇ ಅಂತಸ್ತಿಗೆ ಸಂಬಂಧಿಸಿದಂತೆ ಕೈಗೊಂಡ ಕ್ರಮ ಬಗ್ಗೆ ವರದಿಯೊಂದಿಗೆ ಹಾಜರಾಗಲು ಆದೇಶಿಸಲಾಗಿತ್ತು.

8) ಮುಖ್ಯಾಧಿಕಾರಿ, ಪುರಸಭೆ, ಕಡೂರು, ಇವರು ತನ್ನ ವರದಿಯಲ್ಲಿ ಮು.ಅ.ನಂ:5547ಎ/5400ಎ, 5552/ಎ ಮತ್ತು 5405/1ಎ ರಲ್ಲಿ ವಾಣಿಜ್ಯ ಸಂಕೀರ್ಣ ನಿರ್ಮಿಸಲು ಕಚೇರಿಯಿಂದ ನೀಡಲಾದ ಕಟ್ಟಡ ಪರವಾನಗಿ ಅನುಮತಿಯಂತೆ ನೆಲ ಮಹಡಿ, 1, 2 ಮತ್ತು 3ನೇ ಅಂತಸ್ತುಗಳಿಗೆ ಕಟ್ಟಡ ಪರವಾನಗಿ ನೀಡಲಾಗಿದ್ದು, ಸದರಿ ಕಟ್ಟಡದ ಕಂದಾಯವನ್ನು 2014-15ನೇ ಸಾಲಿನವರೆಗೆ ಪಾವತಿಸಿರುತ್ತಾರೆ. 4ನೇ ಅಂತಸ್ತಿನಲ್ಲಿ 15*18 ಅಳತೆಯಲ್ಲಿ ನೀರು ಸಂಗ್ರಹಣೆ ತೊಟ್ಟಿ ಮತ್ತು ಲಿಫ್ಟಿನ ಕೊಠಡಿಯನ್ನು ನಿರ್ಮಿಸಿರುವುದು ಕಂಡುಬರುತ್ತದೆ. ಆದರೆ, ಆ ಕಟ್ಟಡಕ್ಕೆ ಪುರಸಭೆಯಿಂದ ಯಾವುದೇ ಪರವಾನಗಿ ಪಡೆದಿರುವುದಿಲ್ಲ. ಹಿಂದಿನ ವಿಷಯ ನಿರ್ವಾಹಕರು ವರ್ಗಾವಣೆಗೊಂಡ ಸಮಯದಲ್ಲಿ ವಾಣಿಜ್ಯ ಸಂಕೀರ್ಣ ಕಟ್ಟಡದ ಪರವಾನಗಿಯ ಮೂಲ ಕಡತವನ್ನು ಕಚೇರಿಯಲ್ಲಿ ಯಾರಿಗೂ ಪ್ರಭಾರ ನೀಡದೆ ಇರುವುದರಿಂದ, ಮೂಲ ಕಡತವನ್ನು ಹಾಜರು ಪಡಿಸಲು ಕಷ್ಟವಾಗಿರುತ್ತದೆ. ಆ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಗಳಿಗೆ ಸಹ ವರದಿ ಸಲ್ಲಿಸಲಾಗಿದೆಯೆಂದು ತಿಳಿಸಿರುತ್ತಾರೆ.

9) ಮುಖ್ಯಾಧಿಕಾರಿಯವರ ವರದಿಯ ಮೇಲೆ ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿದ್ದು, ತನ್ನ ಪ್ರತ್ಯುತ್ತರದಲ್ಲಿ ಕಟ್ಟಡದ ಮಾಲೀಕರು ಕಟ್ಟಡ ಪರವಾನಗಿಯಂತೆ ಮತ್ತು ಅನುಮೋದಿತ ನೀಲ ನಕ್ಷೆಯಂತೆ ಕಟ್ಟಡ ನಿರ್ಮಿಸದೆ ತಮ್ಮ ಮನಸೋಇಚ್ಛೆ ಕಟ್ಟಡ ನಿರ್ಮಿಸಿರುವುದು ಕಂಡುಬರುತ್ತದೆ. ಅನುಮೋದಿತ ನಕ್ಷೆಯಂತೆ ಪಾರ್ಕಿಂಗ್ ಪ್ರದೇಶವನ್ನು ಮೀಸಲಿಟ್ಟಿರುವುದಿಲ್ಲ. ಮುಖ್ಯಾಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಮಾಲೀಕರ ಲಂಚ ರುಷುವತ್ತುಗಳಿಗೆ ಒಳಗಾಗಿ ವಿವಾದಿತ ಕಟ್ಟಡದ ಅಳತೆಗಳನ್ನು ನಮೂನೆ-3 ರಲ್ಲಿ ನಮೂದಿಸಿ ವಿತರಿಸಿರುತ್ತಾರೆ. ವಿಷಯ ನಿರ್ವಾಹಕರು ಪ್ರಭಾರ ನೀಡಿರುವುದಿಲ್ಲವೆಂದು ತಿಳಿಸಿರುವುದು ಸತ್ಯಕ್ಕೆ ದೂರವಾದ ವಿಷಯವಾಗಿರುತ್ತದೆ. ಮಾಹಿತಿ ಹಕ್ಕಿನಡಿಯಲ್ಲಿ ಕಟ್ಟಡ ಪರವಾನಗಿ ದಾಖಲೆಗಳನ್ನು ದೂರುದಾರರು ಪಡೆದುಕೊಂಡಿರುತ್ತಾರೆ. ಆದ್ದರಿಂದ, ಸೂಕ್ತ ವಿಚಾರಣೆ ಮಾಡಿ ಅಕ್ರಮ ಕಟ್ಟಡದ ಹೆಚ್ಚುವರಿ ಭಾಗವನ್ನು ತೆರವುಗೊಳಿಸಿ ದಂಡ ವಿಧಿಸಿ ಆದೇಶಿಸಬೇಕೆಂದು ಕೋರಿರುತ್ತಾರೆ.

10) ಎದುರುದಾರರ ಆಕ್ಷೇಪಣೆಯನ್ನು ಗಮನಿಸಿದಾಗ, ಅವರೇ ಒಪ್ಪಿಕೊಂಡಂತೆ ದಿ.18/12/11 ರಂದು ಕಟ್ಟಡ ನಿರ್ಮಾಣದ ಪರವಾನಗಿ ಅವಧಿ ಮುಕ್ತಾಯಗೊಂಡಿರುತ್ತದೆ. ಆದರೆ, ಕಟ್ಟಡದ ಮಾಲೀಕರಿಗೆ ದಿ.28/1/13 ಮತ್ತು 1/3/13 ರಂದು ಕಾಮಗಾರಿ ನಿರ್ಮಿಸಲು ನೋಟೀಸು ನೀಡಿರುವುದು ಕಂಡುಬರುತ್ತದೆ. ನೋಟೀಸು ನೀಡಿದರೂ ಸಹ ಕಟ್ಟಡದ ಕಾಮಗಾರಿ ಪೂರ್ಣಗೊಂಡಿರುವುದು ಮುಖ್ಯಾಧಿಕಾರಿಗಳು ಸಲ್ಲಿಸಿರುವ ಛಾಯಾಚಿತ್ರಗಳನ್ನು ಪರಿಶೀಲಿಸಿದಾಗ ಕಂಡುಬರುತ್ತದೆ. ದಿ.18/12/11 ರಂದು ಪರವಾನಗಿ ಮುಕ್ತಾಯವಾದರೂ ಸಹ ದಿ.28/1/13 ರ ತನಕ ಎದುರುದಾರರು ಯಾವುದೇ ಕ್ರಮವನ್ನು ಕೈಗೊಳ್ಳದಿರುವುದು ಅನುಮಾನಕ್ಕೆ ಎಡೆಮಾಡಿಕೊಡುತ್ತದೆ. ಸದರಿ ಅವಧಿಯಲ್ಲಿ ಎದುರುದಾರರು ತನ್ನ ಕರ್ತವ್ಯವನ್ನು ಸೂಕ್ತ ರೀತಿಯಲ್ಲಿ ನಿಭಾಯಿಸಿದ್ದಲ್ಲಿ ಅಕ್ರಮವಾಗಿ ಅನುಮೋದಿತ ನಕ್ಷೆಯನ್ನು ಉಲ್ಲಂಘಿಸಿ ಕಟ್ಟಲಾಗಿರುವ ಕಟ್ಟಡದ ನಿರ್ಮಾಣವನ್ನು ನಿಲ್ಲಿಸಬಹುದಾಗಿತ್ತು. ದೂರುದಾರರು ತನ್ನ ಪ್ರತ್ಯುತ್ತರದ ಜೊತೆ ಹಾಜರು ಪಡಿಸಿರುವ ಅನುಮೋದಿತ ನಕ್ಷೆಯ ಪ್ರತಿಯನ್ನು ಪರಿಶೀಲಿಸಿದಾಗ, ಬೇಸ್‌ಮೆಂಟ್, ನೆಲ ಮಹಡಿ, 1 ಮತ್ತು 2ನೇ ಮಹಡಿಗೆ ಅನುಮೋದನೆಯನ್ನು ನೀಡಿರುವುದು ಕಂಡುಬರುತ್ತದೆ. 3ನೇ ಅಂತಸ್ತಿನಲ್ಲಿ ಟೆರೆಸ್ ಫ್ಲೋರ್ ಪ್ಲಾನ್‌ಗೆ ಅನುಮೋದನೆ ನೀಡಿರುವುದು ಕಂಡುಬರುತ್ತದೆ. ಆದರೆ ಭಾವಚಿತ್ರವನ್ನು ಪರಿಶೀಲಿಸಿದಾಗ, ಅನುಮೋದಿತ ನಕ್ಷೆಗೆ ವಿರುದ್ಧವಾಗಿ ಕಟ್ಟಡವನ್ನು ಕಟ್ಟಿರುವುದು ಕಂಡುಬರುತ್ತದೆ.

11) ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡಾಗ, ಅನುಮೋದ್ಧಿತ ನಕ್ಷೆಯನ್ನು ಉಲ್ಲಂಘಿಸಿ ಕಟ್ಟಡ ನಿರ್ಮಾಣ ಮಾಡಿದ್ದು, ಅದನ್ನು ಕಾನೂನು ರೀತ್ಯ ತೆರವುಗೊಳಿಸುವುದು ಅವಶ್ಯವಾಗಿರುತ್ತದೆ.

12) ಮೇಲ್ಕಂಡ ಹಿನ್ನೆಲೆಯಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸಕ್ಷಮ ಪ್ರಾಧಿಕಾರಕ್ಕೆ ಅನುಮೋದಿತ ನಕ್ಷೆಯನ್ನು ಉಲ್ಲಂಘಿಸಿ ನಿರ್ಮಿಸಿರುವ ಕಟ್ಟಡವನ್ನು ತೆರವುಗೊಳಿಸಲು ಈ ಮೂಲಕ ಶಿಫಾರಸ್ಸು ಮಾಡಲಾಗಿರುತ್ತದೆ. ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ ಒಂದು ತಿಂಗಳೊಳಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
**ಉಪಲೋಕಾಯುಕ್ತರು-2,**
**ಕರ್ನಾಟಕ ರಾಜ್ಯ, ಬೆಂಗಳೂರು.**